# ಎನ್‌ಐಟಿಕೆಯಿಂದ ಇವಿ-ಸೈಕಲ್ ಅನ್ವೇಷಣೆ, ಹಳೆ ವಿದ್ಯಾರ್ಥಿಗಳಿಂದ ಹಣಕಾಸು ನೆರವು



**ಸುರತ್ಕಲ್, ಡಿ. 18:** ಎನ್ ಐಟಿಕೆ ಸುರತ್ಕಲ್ ಇವಿ ವಿಭಾಗದಲ್ಲಿ ಸ್ಕೂಟರ್, ಬೈಕ್ ಹಾಗೂ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸುವ ಮೂಲಕ ಪರಿಸರ ಸಹ್ಯ ವಾಹನ ಕಂಡು ಹಿಡಯಲು ಆದ್ಯತೆ ನೀಡಿರುವಂತೆಯೇ ಇದೀಗ ಇ-ಸೈಕಲ್‌ನ್ನು ತಯಾರಿಸಿ ಶ್ಲಾಘನೆಗೆ ಪಾತ್ರವಾಗಿದೆ.

ಇದಕ್ಕೆ 1972ರ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳು ಎನ್‌ಐಟಿಕೆಗೆ 15 ಲಕ್ಷ ರೂ.ಗಳ ನೆರವು ನೀಡಿದ್ದಾರೆ.

ಸೆಂಟರ್ ಫಾರ್ ಸಿಸ್ಟಮ್ ಡಿಸೈನ್ ಎರಡು ವಿಭಿನ್ನ ರೀತಿಯ ಇ-ಸೈಕಲ್ ಗಳನ್ನು ತಯಾರಿಸಿದೆ. ಈ ಇ-ಸೈಕಲ್ 3.1 ಸೈಕಲ್‌ಗಾಗಿ ಎಲೆಕ್ಟ್ರಾನಿಕ್ ವೇಗ ನಿಯಂತ್ರಕದೊಂದಿಗೆ 36ಗಿ 6.36 ಲಿಯಾನ್ ಬ್ಯಾಟರಿಯಿಂದ ಚಾಲಿತವಾಗಿದೆ.

ಬ್ರೇಕ್ ಅನ್ನು ಹಿಡಿಯುವ ಮೂಲಕ ಮೋಟಾರ್ ಅನ್ನು ನಿಲ್ಲಿಸಬಹುದು ಮತ್ತು ವೈರ್‌ಲೆಸ್ ಚಾರ್ಜಿಂಗ್ ಸಹ ಇದರ ವೈಶಿಷ್ಟ್ಯವಾಗಿದೆ. ವಿದ್ಯುತ್ ಸರಣಿಯು 36 ವೋಲ್ಟ್, 20 ಬಿಎಲ್‌ಡಿಸಿ ಮೋಟಾರ್ ಅನ್ನು ಸ್ಥಾಪಿಸಿದೆ.

ಇದು ಪ್ರತೀ ಗಂಟೆಗೆ 35 ಕಿ.ಮೀ. ಕ್ರಮಿಸುವ, 40 ಕಿ.ಮೀ. ಮೈಲೇಜ್ ನೀಡುವ ಸಾಮರ್ಥ್ಯ ಹೊಂದಿದೆ. ಮುಂಭಾಗದಲ್ಲಿ ಡ್ಯುಯಲ್ ಸಸ್ಪೆನ್ಷನ್ ಅನ್ನು ಸ್ಥಾಪಿಸಲಾಗಿದೆ. ಅವು ಪೆಡಲ್ ಅಸಿಸ್ಟೆಡ್ ಆಗಿದ್ದು ಸರಿಹೊಂದಿಸಬಹುದಾದ ಆಸನವನ್ನು ಹೊಂದಿವೆ ಮತ್ತು 160-ಎಂಎಂ ಡಿಸ್ಕ್ ಹೊಂದಿರುವ 27.5-ಇಂಚಿನ ಎಫ್-ಆರ್ ಮಿಶ್ರಲೋಹದ ಚಕ್ರವನ್ನು ಹೊಂದಿವೆ. ಪಿ.ಎಂ.ಪೈ, ಅವರು 10 ಲಕ್ಷ ರೂ.ದೇಣಿಗೆ ನೀಡಿದ್ದಾರೆ.

Udayavani, Date: 19/12/22, p, no- Sadina -03